

ಬಿರುಬಿರನೆ ದಾರಿ ಹಿಡಿದು ಊರ ಸನಿಹಕ್ಕೆ ಬಂದ.

ಬಸನಕಟ್ಟೆಯ ಮಾದರ ಕೇರಿಯಲ್ಲಿ ತೆಗೆದಿದ್ದ ಕುಡಿವ ನೀರಿನ ಬಾವಿಗೆ ಬಾಗಿನ ಕೊಟ್ಟು, ಅದನ್ನು ಉದ್ಘಾಟಿಸಲೆಂದು ಕರೆದಿದ್ದ ನಿರಾಥಂಬರ ಸ್ವಾಮಿಗಳು ನಿರಾಡಂಬರರಾಗಿಯೇ ಇದ್ದರಾದರೂ ದಾವಣಗೆರೆಯಿಂದ ಬಂದಿದ್ದ ಕೆಲ ಹರಿಜನ ವಿಚಾರವಾದಿಗಳು ಅವರಿಗೆ ನೂರಾರು ಪ್ರಶ್ನೆಗಳನ್ನು ಎಸೆದು ಪೇಚಿನಲ್ಲಿ ಸಿಕ್ಕಿಸಲು ಪ್ರಯತ್ನಿಸಿದ್ದರು. ಜಾತಿ, ಮತ, ಧರ್ಮ, ಮಠಗಳ ಶೋಷಣೆ ಮುಂತಾದ ಯಾವುದೇ ಪ್ರಶ್ನೆಗಳನ್ನು ಅವರಿಗೆ ಕೇಳಿದಾಗಲೂ ಆತಂಕಕ್ಕೆ ಒಳಗಾಗದೆ ನಿರ್ಭಿಡೆಯಿಂದಲೇ ಉತ್ತರಿಸುತ್ತಾ 'ನಾವೂ ಜಾತಿವಿನಾಶ ಹೋರಾಟವನ್ನೇ ಸುರು ಮಾಡಿದ್ದೀವಿ' ಎಂದರು. ಇದನ್ನೇ ಹಿಡಿದುಕೊಂಡ ಆ ವಿಚಾರವಾದಿಗಳು, 'ಸ್ವಾಮಿಗಳು ಮಾದ್ರಕೇರಿ ಬಾವಿ ಉದ್ಘಾಟನೆಗೆ ಬಂದು ಊರ ಪಟೇಲರ ಮನೇಲಿ ಉಣ್ಣೋದು ಯಾವ ಜಾತಿವಿನಾಶ. ನಮ್ಮ ಕೇರಿಯಲ್ಲೇ ಊಟಮಾಡಿ' ಅಂದರು. ಅವರೋ 'ಆಯ್ತು' ಎಂದು ಎದ್ದು ಸೀದಾ ಸಿದ್ಲಿಂಗಪ್ಪನ ಮನೆಯೊಳಕ್ಕೆ ನಡೆದರು. ಅವರ ಜೊತೆ ಕೇಂದ್ರದ ವಾಸಣ್ಣ, ಗಡ್ಡದಯ್ಯ, ಗಿರಿಯಜ್ಜನೂ ಹೋದರಲ್ಲಾ. ಬ್ರಾಹ್ಮಣನಾದ ವಾಸಣ್ಣನು ಹೊರಡುವಾಗ 'ನೀನು ಬರಬೇಡ ವಾಸಣ್ಣ ನಿಮ್ಮ ಮನೆಯವ್ರ ಅಭಿಪ್ರಾಯ ಹೆಂಗಿರುತ್ತೋ' ಎಂದಿದ್ದಾಗಲೂ ಗುರುನಾಥ 'ಏನಿಲ್ಲ ನಮ್ಮ ಮನೇನಲ್ಲೂ ಈಗ ಸುಧಾರಣೆ ಕಾಣ್ತಾ ಇದೆ. ನಾನೂ ಬರ್ತೀನಿ ನಡಿ' ಎಂದು ಇವನೂ ಕೇರಿಯಲ್ಲಿ ಅವರ ಜೊತೆ ಕುಂತು ಉಂಡೇ ಬಂದಿದ್ದ.

ಗುರುನಾಥನಿಗೆ ಏನು ಧೈರ್ಯವೆಂದರೆ, ಕಟ್ಟಾ ಸಂಪ್ರದಾಯವಾದಿಯಾಗಿದ್ದ ಅಪ್ಪ ಮಲ ಹೊರುವವರ ಕಂಡು ತನ್ನ ಬಗ್ಗೆ ಹೇಸಿಗೆ ಪಟ್ಟುಕೊಂಡಿದ್ದ. ಅವನ ಅಪೇಕ್ಷೆಯ ಮೇರೆಗೆ ಹಿತ್ತಲಲ್ಲಿ ಮಲದ ಗುಂಡಿಯನ್ನು ಗುರುನಾಥ ಮಾಡಿದ್ದ. ಅದರಲ್ಲಿ ಜಾರಿಬಿದ್ದು ಮಲದಲ್ಲಿ ಮುಳುಗಿಹೋದ ಮೇಲೆ ಅಪ್ಪ ಜನಿವಾರ ಕಿತ್ತೆಸೆದು, 'ಈಸು ವರ್ಸ ನಾವು ಮಾಡಿದ್ದರ ಫಲ' ಎಂದಿದ್ದ. ತನ್ನ ಮಗಳು ಅನಸೂಯಳು ಹೆರಿಗೆಯಿಂದ ನರಳುತ್ತಿರುವಾಗ ಬೇರೆ ಜಾತಿಯ ಬಸವ್ವ ಮನಿ ಒಳಕ್ಕೆ ಬಂದಾಗ ಅವ್ವ ಸಿಡಿದು ಬಿದ್ದಿದ್ದಳು. ಯಾವ ಜಾತೀನೋ ಏನೋ ಅಂತ. ಆದರೆ, ಆಕೆ ಇಲ್ಲದಿದ್ರೆ ಅನಸೂಯಳೂ, ಮಗುವೂ ಉಳಿಯುತಿತ್ತೆ? ಮಗುವಿನ ಅಳುವೇ ಅವ್ವನಲ್ಲಿ ಜ್ಞಾನೋದಯಕ್ಕೆ ಕಾರಣವಾಗಿ ಅನ್ಯಜಾತಿಯವಳಾದ ಬಸವ್ವನನ್ನು ಮೆಚ್ಚಿ ಅಪ್ಪಿಕೊಳ್ಳಲಿಲ್ಲವೇ? ಹೀಗೆ ತಮ್ಮ ನಂಬಿಕೆಗಳಿಗೆಲ್ಲ ತಿಲಾಂಜಲಿ ಇಟ್ಟು, ಜಡ ನಂಬಿಕೆಗಳಿಗೆ ಶ್ರಾದ್ಧ ಮಾಡಿ ಜೀವಂತವಾಗಿರುವ ಜನ ಮನೆಯಲ್ಲಿದ್ದಾರೆ. ನಾನೇ ಇನ್ನೂ ಹಳೆಯದಕ್ಕೆ ತಗುಲಿಕೊಂಡಿದ್ದೇನೆ ಎಂದುಕೊಂಡು ವಿಚಾರ ಮಾಡಿಯೇ ಗುರುನಾಥ ಇವತ್ತು ಆ ಸ್ವಾಮಿಗಳ ಮಾತು ಕೇಳಿ 'ಛೇ ನನ್ನದೂ ಒಂದು ಜನ್ಮವೇ' ಎಂದು ಜನಿವಾರ ತೆಗೆದು ಮಾದರ ಕೇರಿಯಲ್ಲಿ ಎಲ್ಲರೊಂದಿಗೂ ಊಟಕ್ಕೆ ಕುಳಿತಿದ್ದ. ಅಲ್ಲಿಂದಲೇ ಈಗ ಊರ ಕಡೆ ನಡೆದಿದ್ದ.